207-100121

207

I

Total No. of Questions - **16**
Total No. of Printed Pages - **4**

Regd. No.

Part - II
KANNADA, Paper - II
(Second Language)

Time : 3 Hours **Max. Marks : 100**

I (A) **ಈ ಕೆಳಗಿನ ಪದ್ಯಗಳಲ್ಲಿ ಒಂದರ ಭಾವಾರ್ಥವನ್ನು ಬರೆಯಿರಿ.** **1×5=5**

ಉಣದಿರ್ದಾ ಧನಮಿರ್ದೊಡೇನು ಸುತನಿರ್ದೆ ಮುಪ್ಪಿನಲ್ಲಾಗದಾ।
ಒಣಗಲ್ಬೈರಿಗೆ ಬಾರದಿದ್ದ ಮಳೆ ತಾಂ ಬಂದೆನಾಪತ್ತಿನೊಳ್॥
ಮಣಿದುಂ ನೋಡದಬಂಧುವೇತಕೆಣಿಸಲ್ ಕಾಲೋಚಿತಕ್ಕೈದಿದಾ।
ತೃಣವೇ ಪರ್ವತವಲ್ಲವೇ ಹರಹರ ಶ್ರೀ ಚೆನ್ನಸೋಮೇಶ್ವರಾ॥

ಅಥವಾ

ಏಳು ಚಿನ್ನ,ಬೆಳಗಾಯ್ತು ಅಣ್ಣ , ಮೂಡಲವು ತೆರೆಯು ಕಣ್ಣ,
ನಕ್ಷತ್ರ ಜಾರಿ,ತಮವೆಲ್ಲ ಸೋರಿ,ಮಿಗಿಲಹುದು ಭಾನಬಣ್ಣ,
ಜೇನ್ನೊಣಗಳ ಹೆದೆಗೆ,ಹೂ ಬಾಣ ಹೂಡಿ ಝುಂ ಎಂದು ಬಿಟ್ಟ ಮಾರಿ
ಗುಡಿಗೋಪುರಕ್ಕು,ಬಲೆ ಬೀಸಿ ಬಂದ, ಅಗೋ ಅಳುಕು ಬೇಟೆಗಾರ.

(B) **ಈ ಕೆಳಗಿನ ಇಬ್ಬರು ಕವಿ/ ಲೇಖಕರಲ್ಲಿ ಒಬ್ಬರ ಪರಿಚಯ ಬರೆಯಿರಿ.** **1×5=5**

1. ಜಿ ಎಸ್ ಶಿವರುದ್ರಪ್ಪ 2. ಎಚ್ ನಾಗವೇಣಿ.

II **ಈ ಕೆಳಗಿನವುಗಳಲ್ಲಿ ಒಂದಕ್ಕೆ 20 ವಾಕ್ಯಗಳು ಮೀರದಂತೆ ಉತ್ತರಿಸಿ.** **1×5=5**

1. ರಕ್ಷಿಸಬೇಕಾದವರೆ ಭಕ್ಷಕರಾದರೆ ಒದಗುವ ದುರ್ಘಟನೆಯನ್ನು ಬಸವಣ್ಣನವರು ಹೇಗೆ ಚಿತ್ರಿಸಿದ್ದಾರೆ?
2. 'ಒಮ್ಮೆ ನಗುತ್ತೇವೆ 'ಎಂಬ ಕವಿತೆಯಲ್ಲಿ ವ್ಯಕ್ತವಾಗುವ ನಗುವಿನ ವೈಶಿಷ್ಟ್ಯವನ್ನು ವಿವರಿಸಿ.

207-100121

III. ಈ ಕೆಳಗಿನವುಗಳಲ್ಲಿ ಒಂದಕ್ಕೆ 20 ವಾಕ್ಯಗಳು ಮೀರದಂತೆ ಉತ್ತರಿಸಿ. **1×5=5**

1. ತಾಯಿ -ತಂದೆ -ಶಿಕ್ಷಕರು ಸೇರಿ ಆದ ತ್ರಿಭುಜವೇ ಉತ್ತಮ ಬದುಕಿಗೆ ಆದರ್ಶ ಮಾದರಿ ಹೇಗೆ? ವಿವರಿಸಿ.
2. ಅಭಿವೃದ್ಧಿ ತರುವ ಪ್ರಾಕೃತಿಕ ನಾಶದ ಸ್ವರೂಪವನ್ನು ಪಠ್ಯದ ಹಿನ್ನೆಲೆಯಲ್ಲಿ ಚರ್ಚಿಸಿರಿ.

IV. ಈ ಕೆಳಗಿನವುಗಳಲ್ಲಿ ಒಂದಕ್ಕೆ 20 ವಾಕ್ಯಗಳು ಮೀರದಂತೆ ಉತ್ತರಿಸಿ. **1×5=5**

1. ಬೀದಿನಾಯಿಗಳ ನಿವಾರಣೆಗೆ ಖಾನ್ ಸಾಹೇಬರು ತೆಗೆದುಕೊಂಡ ಕ್ರಮಗಳಾವವು?
2. ಅರಣ್ಯ ಇಲಾಖೆಯ ಶತ್ರುಗಳ ಕಾರ್ಯಭಾರವನ್ನು ನಾಗರಾಜ ವಿವರಿಸಿದ್ದು ಹೇಗೆ?

V. ಈ ಕೆಳಗಿನವುಗಳಲ್ಲಿ ಎರಡಕ್ಕೆ ಸಂದರ್ಭ ಸೂಚಿಸಿ ವಿವರಿಸಿ ಬರೆಯಿರಿ. **2×3=6**

1. ಸಮಧಿಕರಾರ್ ಜಗತ್ರಯದೊಳಿನ್ನೆನಗೆ?
2. ಆವ ಬೆಂಬಳಿಯ ಬಿಡ ನಾನಿಮ್ಮ ಬದುಕುವವಳಲ್ಲ.
3. ನೀ ತಂಪ ನನ್ನ ತವರೀಗಿ.
4. ಮಾತೇ ಮರೆತು ಹೋಗಿದೆ ಕಣೆ.

VI. ಈ ಕೆಳಗಿನವುಗಳಲ್ಲಿ ಎರಡಕ್ಕೆ ಸಂದರ್ಭ ಸೂಚಿಸಿ ವಿವರಿಸಿ ಬರೆಯಿರಿ. **2×3=6**

1. ಬಸಲಿಂಗಪ್ಪ,ನೀನು ತುಂಬಾ ಒಳ್ಳೆಯವನು.
2. " ನೋಡು ನಿನ್ನೆದುರು ಎರಡು ಆಯ್ಕೆಗಳಿವೆ"
3. ನಾವು ಯಾವ ಪತ್ರಿಕೆಗಳನ್ನು ಓದುತ್ತಿದ್ದೇವೆ?
4. ಬಾಯಿ ಚಪಲ ತಣಿಸುವ ಅಕ್ಷಯ ಪಾತ್ರೆ.

VII. ಈ ಕೆಳಗಿನವುಗಳಲ್ಲಿ ಎರಡಕ್ಕೆ ಸಂಕ್ಷಿಪ್ತವಾಗಿ ಉತ್ತರಿಸಿ. **2×2=4**

1. ಗುರುವಿನ ಲಕ್ಷಣಗಳೇನು?
2. ಕುಜನರಾದವರು ಏನೆಂದು ನುಡಿಯುತ್ತಾರೆ?
3. ಮಗು ಕಲಿತ ವಿದ್ಯೆಗಳಾವುವು?
4. ಎಣ್ಣೆ ತೀರಿದ ದೀಪಗಳು ಏನನ್ನು ಸೂಚಿಸುತ್ತದೆ?

VIII. ಈ ಕೆಳಗಿನವುಗಳಲ್ಲಿ ಎರಡಕ್ಕೆ ಸಂಕ್ಷಿಪ್ತವಾಗಿ ಉತ್ತರಿಸಿ. **2×2=4**

1. ಕುಂಡದಲ್ಲಿ ನೆಟ್ಟ ಗಿಡಗಳು ಸ್ಥಿತಿ ಹೇಗಿರುತ್ತದೆ?
2. ಮುಸುರೆ ಪಾತ್ರೆಗಳ 'ಒಡೆಯ' ಏನೆಂದು ಯೋಚಿಸಿದನು?
3. ಮನೋರಮೆ ಕತೆ ಹೇಳೆಂದು ಕೇಳಲು ಕಾರಣವೇನು?
4. ರೋಗಿಗಳ ಹಾಗೂ ಪಥ್ಯ ಮಾಡುವವರ ಜಿದ್ದು ಎಂತಹುದು?

20-10-2021 10:27:07-207

IX. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ. **5×1=5**

1. ಯಾರನ್ನು ಕೊಲ್ಲುವದಿಲ್ಲೆಂದು ವಿದ್ಯಾ ದೇವತೆ ಹೇಳಿತು?
2. ರಾಜಸಭೆಯೊಳಗೆ ದ್ರೌಪದಿಯನ್ನು ಒದೆದವರು ಯಾರು?
3. ಹೊರಲೋಕವನ್ನು ಪರಿಚಯಿಸಿ ಎಚ್ಚರಿಕೆ ಕೊಟ್ಟವಳು ಯಾರು?
4. ತೈಲ ತೀರಿದ್ದು ಹೇಗೆ ತಿಳಿಯುತ್ತದೆ?
5. ಜನರಿಗೆ ಯಾವುದಕ್ಕೆ ಗತಿಯಿಲ್ಲ?

X. ಈ ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ. **5×1=5**

1. ದುರಂತದ ಶಾಪಕ್ಕೆ ತುತ್ತಾಗುವವರು ಯಾರು?
2. ದುರಾಸೆಯ ಹುಡುಗನನ್ನು ನಿರಾಕರಿಸಿದಳು ಯಾರು?
3. ಯಾವುದು ನಮ್ಮ ಮೈಗೆ ಹತ್ತುವುದು?
4. ವಿಜ್ಞಾನದ ಅಡಿಪಾಯ ಯಾವುದು?
5. ವಸುಧೆಗೆ ಒಡೆಯನೆನಿಸಿದವನು ಯಾರು?

XI. ಈ ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ. **5×1=5**

1. ನಿರೂಪಕರ ಕೊಡಲಿಯ ಆಕಾರ ಹೇಗಿತ್ತು?
2. ಪೋಸ್ಟ್ ಮನ್ ಜಬ್ಬಾರನಿಗೆ ಒದಗಿದ ತೊಂದರೆ ಏನು?
3. ಟೆಲಿಫೋನ್ ಕಂಬದ ಮೇಲೆ ಮೃತನಾದ ಲೈನ್ ಮನ್ ಯಾರು?
4. ರೇಂಜರ್ ಆನೆಗೆ ಶೂಟ್ ಮಾಡುವಂತೆ ಯಾರಿಗೆ ಸೂಚಿಸಿದರು?
5. ಹಳೇಕೊಪ್ಪದ ಸುಬ್ಬಣ್ಣನಿಗೆ ಆನೆಯಿಂದಾದ ತೊಂದರೆ ಯಾವುದು?

XII. ಈ ಕೆಳಗಿನ ಛಂದಸ್ಸುಗಳಲ್ಲಿ ಒಂದರ ಲಕ್ಷಣಗಳನ್ನು ಬರೆಯಿರಿ. **1×5=5**

1. ಕಂದಪದ್ಯ 2. ಸಾಂಗತ್ಯ 3. ಮತ್ತೇಭವಿಕ್ರೀಡಿತ ವೃತ್ತ.

XIII. ಈ ಕೆಳಗಿನ ಪದ್ಯಗಳಲ್ಲಿ ಒಂದಕ್ಕೆ ಪ್ರಸ್ತಾರ ಹಾಕಿ ಗಣ ವಿಂಗಡಿಸಿ, ಛಂದಸ್ಸಿನ ಹೆಸರು ಬರೆಯಿರಿ. **1×5=5**

1. ತನುಪುಳಕವುಬ್ಬರಿಸಿ ಮೆಲ್ಲನೆ
   ವನಿತೆಯನು ತೆಗೆದೆಪ್ಪಿದನು ಕಂ
   ಬನಿಯದೊಡೆದನು ಸೆರಗಿನಲಿ ಕಲಿಭೀಮ ಮಾನಿನಿಯ.
2. ಪತ್ತುವಿಡದಿರ್ದನೇ ರವಿ
   ಪತ್ತಿದ ಸಂಧ್ಯನುರಾಗಮಂ ಮನದಳಿಪಂ
3. ಷಣವಸನಾಂಗ ರಾಗಮುಮಲ್ಲೊದೆ ಖೇಚರ ರಾಜ್ಯಲಕ್ಷಿಯಂ.

207-10-0121
207-10-0121
207-10-0121

XIV. ಈ ಕೆಳಗಿನವುಗಳಲ್ಲಿ ಒಂದರ ಅಲಂಕಾರ ಸಮನ್ವಯಿಸಿ ಬರೆಯಿರಿ. **1×5=5**

1. ಶ್ರೀ ರಾಮನು ಮಂಗಳವು ಮನೆಯನ್ನು ತೊರೆಯುವಂತೆ ಹೊರಟನು.
2. ವಿರೋಧಿ ಬಲಾಂಬುರಾಶಿಯಂ.
3. ಮಾತು ಬಲ್ಲವನಿಗೆ ಜಗಳವಿಲ್ಲ, ಊಟ ಬಲ್ಲವನಿಗೆ ರೋಗವಿಲ್ಲ.

XV. (A) ಈ ಕೆಳಗಿನ ಪದಗಳಲ್ಲಿ ಐದಕ್ಕೆ ಅರ್ಥ ಬರೆಯಿರಿ. **5×1=5**

1. ತೃಣಕಲ್ಪ 2. ಕಡುಪಂ 3. ತೃಷೆ. 4. ಸ್ವಾದ.
5 ಹಾಸುಗಂಬಿ 6. ಗೇಯು. 7. ಕುತ್ತು. 8. ಪೋರ.

(B) ಈ ಕೆಳಗಿನ ಪದಗಳಲ್ಲಿ ಆರಕ್ಕೆ ವಿರುದ್ಧಾರ್ಥ ಬರೆಯಿರಿ. **6×1=6**

1. ಜನನ. 2. ಸಮ. 3. ಬಂಧನ 4. ಶಾಶ್ವತ
5. ಏರು 6. ಲಾಭ 7. ಸಜಾತಿ 8. ಸ್ವತಂತ್ರ.

(C) ಈ ಕೆಳಗಿನ ಪದಗಳನ್ನು ಉಪಯೋಗಿಸಿ ಸ್ವಂತ ವಾಕ್ಯ ರಚನೆ ಮಾಡಿರಿ. **5×1=5**

1. ವಿರೋಧ 2. ಪ್ರವಾಹ 3. ಯೋಗ್ಯತೆ 4. ಸಂಬಂಧ 5. ಆದಾಯ.

XVI. (A) ಈ ಕೆಳಗಿನವುಗಳಲ್ಲಿ ಎರಡಕ್ಕೆ ಟಿಪ್ಪಣಿ ಬರೆಯಿರಿ. **2×2=4**

1. ನಾಮಪದ 2. ಕ್ರಿಯಾಪದ 3. ಜೋಡಾನುತಿ 4. ಸುವರ್ಣದೀರ್ಘಸಂಧಿ

(B) ಈ ಕೆಳಗಿನವುಗಳಲ್ಲಿ ಒಂದಕ್ಕೆ ಪ್ರಬಂಧ ಬರೆಯಿರಿ. **1×5=5**

1. ತಾಳಿದವನು ಬಾಳಿಯಾನು 2. ನೀರಿನ ಮಹತ್ವ 3. ಚಂದ್ರಯಾನ.

207-100121

207-100121

207-100121